# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಕೆ. ತೇಜಪ್ಪ ಕುಲಾಲ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಟೇಶ್ವರ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: D.O.NO.Compt/Uplok/MYS/3747/2015/PP Dated: 29-05-2017

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ:21-04-2017 ರಂದು ತಮ್ಮ ವರದಿಯಲ್ಲಿ ದೂರುದಾರರಾದ ಶ್ರೀ ಉದಯ್ ದೇವಾಡಿಗ ಇವರು ಕೋಟೇಶ್ವರ ಗ್ರಾಮ ಪಂಚಾಯತ್‌ಗೆ ಸರ್ಕಾರದ ಸುತ್ತೋಲೆಗಳಂತೆ ಭೂ ಪರಿವರ್ತಿತ ಆಸ್ತಿಗಳ ಪೂರ್ಣ ವಿಸ್ತೀರ್ಣಕ್ಕೆ ನಮೂನೆ 9 ಮತ್ತು 11-ಎ ಅನ್ನು ನೀಡಲು ಅವಕಾಶ ಇರುತ್ತದೆ. ಆದರೆ ಎದುರುದಾರರು ಸರ್ಕಾರದ ಸುತ್ತೋಲೆಗಳನ್ನು ಪಾಲಿಸದೆ ಆಸ್ತಿಗಳ ವಿಭಜನೆ ಮಾಡಿ ನಮೂನೆ 9 ಮತ್ತು 11-ಎ ಅನ್ನು ವಿತರಿಸಿರುತ್ತಾರೆ. ಇದು ಹಣ ಆಮೀಶದಿಂದ ಮಾಡಿದ ಕ್ರಮವಾಗಿರುತ್ತದೆ. ಆದ್ದರಿಂದ ದೂರುದಾರರು ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ ವಿಚಾರಣೆಗೆ ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು,ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿಯವರು ತಮ್ಮ ಆಕ್ಷೇಪಣೆಯಲ್ಲಿ ಕುಂದಾಪುರ ತಾಲೂಕಿನ ಕೋಟೇಶ್ವರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ತಮ್ಮ ಸ್ವಂತ ಹೆಸರಿನಲ್ಲಿ ಭೂ ಪರಿವರ್ತಿತ ಖಾಲಿ ಜಾಗಗಳನ್ನು ಹೊಂದಿರುವ ಕೋಟೇಶ್ವರದ ಶ್ರೀ ಚಂದ್ರಶೇಖರ್ ಹೆಗ್ಗಡೆ, ಶ್ರೀ ಶಂಕರ್ ಶೆಟ್ಟಿ, ದಿವಂಗತ ಎಮ್.ಕೊರಗಯ್ಯ ಇವರ ಮಕ್ಕಳು, ಶ್ರೀಮತಿ ಸುಮಂಗಲ ಭಟ್ಟ, ಶ್ರೀಮತಿ ಹೆಚ್.ರಂಜನಿ ರಾವ್ ಇವರುಗಳ ಮನವಿಯ ವಿಚಾರಗಳನ್ನು ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಸುತ್ತೋಲೆ ಗ್ರಾಪಂಅ 2013(ಭ-6) ದಿನಾಂಕ:03/02/2014 ರ ಸುತ್ತೋಲೆಯಲ್ಲಿ ಸ್ಥಳೀಯ ಯೋಜನಾ ಪ್ರಾಧಿಕಾರ ಅಧಿಕಾರ ವ್ಯಾಪ್ತಿಯ ಹೊರಗಡೆ ಇರುವ ಪ್ರದೇಶವು ನಗರ ಮತ್ತು ನಗರ ಗ್ರಾಮಾಂತರ ಯೋಜನಾ ಅಧಿನಿಯಮದ ವ್ಯಾಪ್ತಿಗೆ ಒಳಪಡದಿರವ ಕಾರಣ,ಸ್ಥಳೀಯ ಯೋಜನಾ ಪ್ರಾಧಿಕಾರಿಗಳ ಹೊರಗಡೆ ಇರುವ ಪ್ರದೇಶಗಳಲ್ಲಿರುವ ಪಸ್ತುತ ಅಸ್ತಿತ್ವದಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಲೇಔಟ್ ಪ್ಲಾನ್ಗಳಿಗೆ ನಗರ ಯೋಗನಾ ನಿರ್ದೇಶನಾಲಯದ ಅನುಮೋದನೆ ದಾಖಲೆ ಅಗತ್ಯವಿಲ್ಲವಂದು ಹಾಗೂ 14/06/2013 ರ ಹಿಂದಿನ ಎಲ್ಲ ಭೂ ಪರಿವರ್ತನೆಗೊಂಡ ನಿವೇಶನಗಳಿಗೆ ಗ್ರಾಮ ಪಂಚಾಯತ್‌ಯಿಂದ ನಮೂನೆ 9 ಮತ್ತು 11ಎ ನೀಡಬಹುದಾಗಿ ಮೇಲೆ ಹೇಳಿದ ಸರ್ಕಾರಿ ಸುತ್ತೋಲೆಯಲ್ಲಿ ನಿರ್ದಿಷ್ಟಪಡಿಸಿರುವುದರಿಂದ, ಈ ಬಗ್ಗೆ ಪರಿಶೀಲಿಸಲಾಗಿ ಅರ್ಜಿದಾರರು ಕೋರಿದ ನಮೂನೆ 9 ಮತ್ತು 11ಎ ವಿಸ್ತೀರ್ಣ ಸ್ಥಳವು 14/06/2013 ರ ಹಿಂದಿನ ಹಳೆಯ ಭೂ ಪರಿವರ್ತಿತ ಖಾಲಿ ನಿವೇಶನಗಳಾಗಿರುವುದರಿಂದ ಹಾಗೂ ಈ ಕುರಿತು ಅರ್ಜಿದಾರರಿಂದ ಸೂಕ್ತ ದಾಖಲೆಗಳಾದ ಕಂದಾಯ ಇಲಾಖೆಯ ತಾಲೂಕು ಭೂಮಾಪಕ ಅಧಿಕಾರಿ, ಗ್ರಾಮ ಲೆಕ್ಕಿಗರು ನೀಡಿರುವ ಜಾಗದ ನಕಾಶೆ, ಆರ್‌ಟಿಸಿ,ದಾಸ್ತಾವೇಜು, ಛಾಯಾಚಿತ್ರ,ಗುರುತು ಚೀಟಿ ದಾಖಲೆ ಇತ್ಯಾದಿ ದಾಖಲೆಗಳನ್ನು ಅರ್ಜಿದಾರರು ಗ್ರಾಮ ಪಂಚಾಯಿತಿ ಅನುಮೋದನೆಗೆ ಪಡೆದುಕೋಂಡು ಸದರಿಯವರಿಗೆ ನಮೂನೆ 9 ಮತ್ತು 11ಎ ದೃಢೀಕೃತ ಪತ್ರವನ್ನು ಮಂಜೂರುಮಾಡಿ ನೀಡಲಾಗುತ್ತದೆ.ಇದರಲ್ಲಿ ಯಾವುದೇ ದುರುದ್ದೇಶ ಇರುವುದ್ದಿಲ್ಲ,ಯಾವುದೇ ದಾಖಲೆಗಳನ್ನು ತಿದ್ದಿರುವುದಿಲ್ಲ.ಸರ್ಕಾರದ ಆದೇಶದಂತೆ ಗ್ರಾಮ ಪಂಚಾಯತಿ ಮಾಸಿಕ ಸಾಮಾನ್ಯ ಸಭೆಯ ನಿರ್ಣಯದಂತೆ ಪರಿಶೀಲಿಸಿ ನಮೂನೆ 9 ಮತ್ತು 11ಎ ಯ ಧೃಢೀಕರಣ ನೀಡಿರುವುದ್ದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಎದುರುದಾರರ ಆಕ್ಷೇಪಣೆ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು,ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ,ಅದರಲ್ಲಿ ದಿ:14/06/2013 ರ ಮೊದಲು ಭೂ ಪರಿವರ್ತನೆ ಆದ ಸ್ಥಳಗಳಿಗೆ ನಮೂನೆ 9 ಹಾಗೂ 11 ಗಳನ್ನು ನೀಡುವಂತೆ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವುದು ನಿಜವಿರುತ್ತದೆ. ಆದರೆ ಭೂಪರಿವರ್ತನೆಯಾದ ಸಂಪೂರ್ಣ ಜಾಗಕ್ಕೆ ನಮೂನೆ 9 ಮತ್ತು 11 ಅನ್ನು ನೀಡಬೇಕೆ ವಿನಃ ಸದರಿ ಜಮೀನನ್ನು ತುಂಡು ಮಾಡಿ ಅರ್ಜಿದಾರರು ಕೋರಿರುವ ಜಾಗಕ್ಕೆ ನಮೂನೆ 9 ಮತ್ತು 11 ಅನ್ನು ನೀಡುವ ಅಧಿಕಾರವಿರುವುದಿಲ್ಲ. ಈ ಪ್ರಕರಣದಲ್ಲಿ 0.22 ಎಕರೆ ಸ್ಥಳವನ್ನು ದಿ:26/09/2014 ರಂದು ಶ್ರೀಮತಿ ಸುಮಂಗಲ ಭಟ್ ರವರ ಮುಖೇನ ಅರ್ಜಿಯನ್ನು ದಾಖಲಿಸಿಕೊಂಡು ಅದನ್ನು ತುಂಡುಮಾಡಿ 0.10 ಸ್ಥಳಕ್ಕೆ ನಮೂನೆ 9 ಮತ್ತು 11 ಅನ್ನು ನೀಡಿರುತ್ತಾರೆ.ಇದು ನಿಯಮಕ್ಕೆ ವಿರುದ್ಧವಾಗಿರುತ್ತದೆ .ಆದರೆ, ಇದೇ ರೀತಿ ಹಲವಾರು ಪ್ರಕರಣಗಳು ಸಹ ಇರುತ್ತವೆ.ಆದ್ದರಿಂದ, ಎದುರುದಾರರು ತಮ್ಮ ಕರ್ತವ್ಯ ವ್ಯಾಪ್ತಿಯನ್ನು ಮೀರಿ ಕರ್ತವ್ಯ ನಿರ್ವಹಿಸಿರುತ್ತಾರೆಂದು ತಿಳಿಸಿರುತ್ತಾರೆ.

ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಸರ್ಕಾರದ ಮೇಲೆ ಹೇಳಿದ ಸುತ್ತೋಲೆಯನ್ನು ಪರಿಶೀಲಿಸಿದಲ್ಲಿ ನಮೂನೆ 9 ಮತ್ತು 11 ಅನ್ನು ನೀಡುವ ಪೂರ್ವದಲ್ಲಿ ಅರ್ಜಿದಾರರ ಆಸ್ತಿಯು ಅಧಿಕೃತವಾದ್ದದೇ ಅಥವಾ ಇಲ್ಲವೇ ಎಂಬುದನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಪರಿಶೀಲಿಸಬೇಕಾಗಿರುತ್ತದೆ ಎಂದು ತಿಳಿಸಲಾಗಿರುತ್ತದೆ. ಮೂಲ/ಹಳೆಯ ಗ್ರಾಮಠಾಣಾ ವ್ಯಾಪ್ತಿಯ ಒಳಗೆ ಇರುವ ಆಸ್ತಿ/ನಿವೇಶನ ಎಂದು ಲಗತ್ತಿಸಿದ ನಮೂನೆಯಲ್ಲಿ ತಹಸಿಲ್ದಾರರ/ಕಂದಾಯ ಪರಿವೀಕ್ಷಕರ ದೃಢೀಕರಣವಿರಬೇಕೆಂದು ತಿಳಿಸಲಾಗಿದೆ.ಹಾಗೆಯೇ ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರ ಆವಾಸ್ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ವಸತಿ ಇಲಾಖೆ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ :ಹೆಚ್ ಎ ಎನ್ 2011 ದಿ:30/01/2012 ರಂತೆ ಸೃಜಿಸುವ ಆಸ್ತಿಯಾಗಿರುತ್ತದೆ ಎಂದು ತಿಳಿಸಲಾಗಿದೆ. ಭೂ ಪರಿವರ್ತನೆಯಾದ ವ್ಯವಸಾಯದ ಜಮೀನಿನಲ್ಲಿ ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯೋಂದಿಗೆ ಸೃಜಿಸಲಾದ ಆಸ್ತಿಯೆಂದು ಪರಿಗಣಿಸಲಾಗಿದೆ ಎಂದು ತಿಳಿಸಲಾಗಿದೆ.ಇದಲ್ಲದೆ, ಸ್ಥಳೀಯ ಯೋಜನಾ ಪ್ರಾಧಿಕಾರದ ಹೊರಗಡೆ ಇರುವ ನಿವೇಶನವು ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ವ್ಯಾಪ್ತಿಗೆ ಒಳಪಡದಿರುವ ಕಾರಣ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಹೊರಗಡೆ ಇರುವ ಇರುವ ಪ್ರದೇಶಗಳಲ್ಲಿರುವ ಪ್ರಸ್ತುತ ಅಸ್ತಿತ್ವದಲ್ಲಿರುವ ಆಸ್ತಿಗಳಿಗೆ ಸಂಭಂದಿಸಿದಂತೆ ನಗರ ಯೋಜನಾ ನಿರ್ದೇಶನಾಲಯ ಅನುಮೋದನೆಯ ದಾಖಲೆಗಳನ್ನು ಒದಗಿಸುವ ಅಗತ್ಯವಿಲ್ಲವೆಂದು ತಿಳಿಸಿರುವುದು ಕಂಡುಬರುತ್ತದೆ.ಎದುರುದಾರರು ಹಾಜರುಪಡಿಸಿರುವ ದಾಖಲೆಗಳಲ್ಲಿ ಶ್ರೀ ಚಂದ್ರಶೇಖರ್ ಹೆಗ್ಗಡೆ ಇವರಿಗೆ ಸಂಬಂಧಿಸಿದ ಸ್ವತ್ತಿನ ಸಂಖ್ಯೆ:152600203900104230 ಇಂದು ಭೂಪರಿವರ್ತನೆಗೊಂಡು ಜಾಗವಾಗಿರುತ್ತದೆ ಎಂದು ಹಿಂದೆ ಇದು ಸರ್ವೆ ನಂಬರ್ 308/7 ರಲ್ಲಿ ಇದ್ದ 1.09 ವಿಸ್ತೀರ್ಣದ ಜಮೀನಾಗಿತ್ತೆಂದು ಕಂಡು ಬರುತ್ತದೆ.ಅದರಲ್ಲಿ 0.10.50 ಎಕರೆ ಜಾಗಕ್ಕೆ 9 ಮತ್ತು 11ಎ ದೃಢೀಕರಣ ನೀಡುವುದು ಕಂಡು ಬರುತ್ತದೆ.

ಹಾಗೆಯೇ ಶ್ರೀಮತಿ ಸುಮಂಗಲ ಭಟ್ ಇವರ ಆಸ್ತಿ ಸಂಖ್ಯೆ:152600203900194090 ಇದಕ್ಕೆ ಸಂಬಂಧಿಸಿದಂತೆ ಸದರಿ ಆಸ್ತಿಯು ಸರ್ವೆ ನಂ: 160/4ಎ1ರಲ್ಲಿ ಇದ್ದ 0.10 ಮತ್ತು ಸರ್ವೇ ನಂಬರ್ 160/4ಎ2 ರಲ್ಲಿ ಇದ್ದ 0.31.25 ಎಕರೆ ಅಂದರೆ ಒಟ್ಟು 0.41.25 ಎಕರೆ ವಿಸ್ತೀರ್ಣದ ಜಮೀನು ಭೂಪರಿವರ್ತನೆಗೊಂಡಿರುತ್ತದೆ ಎಂದು ಕಂಡು ಬರುತ್ತದೆ. ಇದರಲ್ಲಿ 0.10.50 ಎಕರೆ ವಿಸ್ತೀರ್ಣದ ಜಾಗಕ್ಕೆ ನಮೂನೆ 9 ಮತ್ತು 11 ಅನ್ನು ನೀಡಿರುವುದು ಕಮಡು ಬರುತ್ತದೆ . ಹಾಗೆಯೇ ಶ್ರೀಮತಿ ರಂಜನಿರಾವ್ ಇವರು ಸ್ವತ್ತಿನ ಸಂ:152600203900194360 ಎಂದು ಇದ್ದು,ಇದು ಸರ್ವೆ ನಂಬರ್ 141/15 ರಲ್ಲಿ 0.42 ಎಕರೆ ಜಮೀನು ಭೂಪರಿವರ್ತನೆಗೋಂಡಿರುವುದು ಕಂಡುಬರುತ್ತದೆ.ಇದರಲ್ಲಿ 0.08 ಎಕರೆ ವಿಸ್ತೀರ್ಣದ ಜಾಗಕ್ಕೆ ನಮೂನೆ 9 ಮತ್ತು 11ಎ ದೃಢೀಕರಣ/ ಖಾತೆ ನೀಡಿದ್ದು ಕಂಡು ಬರುತ್ತದೆ. ಆದರೆ,ದಿ:09/02/2015 ರ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಇವರು ಕಾರ್ಯನಿರ್ವಾಹಕ ಅಧಿಕಾರಿ , ತಾಲೂಕು ಪಂಚಾಯತಿ, ಉಡುಪಿ/ಕುಂದಾಪುರ/ಕಾರ್ಕಳ ಇವರಿಗೆ ಬರೆದಿರುವ ಪತ್ರದಲ್ಲಿ "ಉಲ್ಲೇಖ (2)ರ ಪ್ರಶ್ನೋತ್ತರ ಪ್ರಶ್ನೆ 6 ರಲ್ಲಿ ತಿಳೀಸಿರುವಂತೆ ಒಂದು ಆಸ್ತಿಯನ್ನು ವಿಭಜನೆ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ಇರುವುದಿಲ್ಲ.ಆದುದ್ದರಿಂದ,ಪರಿವರ್ತನೆಯಾದ ಆಸ್ತಿಗಳ ಪೂರ್ಣ ವಿಸ್ತೀರ್ಣಕ್ಕೆ 9 ಮತ್ತು 11 ಅನ್ನು ನೀಡುವುದಕ್ಕೆ ಮಾತ್ರ ಸೀಮಿತವಾಗಿರುತ್ತದೆ ಎಂದು ತಿಳಿಸಿರುವುದು ಕಂಡುಬರುತ್ತದೆ.(ಸದರಿ ಪತ್ರದ ಪ್ರತಿಯನ್ನು ಪ್ರಕರಣದಲ್ಲಿ ವಿಭಜಿಸಿದ ಪರಿವರ್ತಿತ ಜಾಗಗಳಿಗೆ ನಮೂನೆ 9 ಮತ್ತು 11 ಅನ್ನು ಎದುರುದಾರರು ನೀಡಿ ಕರ್ತವ್ಯಲೋಪವೆಸಗಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಕೆ. ತೇಜಪ್ಪ ಕುಲಾಲ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಟೇಶ್ವರ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಸಾರ್ವಜನಿಕ / ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966, ನಿಯಮ 3(1)(i)(ii) ಮತ್ತು (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ ಎದುರುದಾರರು ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ನಿರ್ಣಯಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/508/ಗ್ರಾಪಂಕಾ/2017 ಬೆಂಗಳೂರು, ದಿನಾಂಕ:17-06-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ. ತೇಜಪ್ಪ ಕುಲಾಲ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಟೇಶ್ವರ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ಪತ್ರಗಳನ್ನು ಪುಟ ಸಂಖ್ಯೆ: 1 ರಿಂದ 156 ವರೆಗೂ ಲಗತ್ತಿಸಿ ಹಿಂದುರಿಗಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ
6. ಶ್ರೀ ಕೆ. ತೇಜಪ್ಪ ಕುಲಾಲ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಟೇಶ್ವರ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ
8. ಗಣಕ ಕೋಶ.